ಈ ಲೇಖನದ ವಿಷಯಾನುಕ್ರಮಣಿಕೆ


**ದೇವರ ಪೂಜೆ 2**

**ದೇವರ ಪೂಜೆ ಎಂದರೇನು 4**

**ದೇವರ ಪೂಜೆ ಯಾಕಾಗಿ ಮಾಡಬೇಕು 6**

ಮಾಡು ಎಂದು ದೇವರ ಆಜ್ಞೆಯಿದೆ, ಅದಕ್ಕಾಗಿ 6

ಮಾಡದಿದ್ದಲ್ಲಿ ಲೋಕಚಕ್ರವನ್ನು ಮುರಿದ ಪಾಪ 7

ಪೂಜೆ ಮಾಡದ ಮನುಷ್ಯ ಕಳ್ಳ — ಗೀತೆ 12

ಪೂಜೆ ಮಾಡದಿದ್ದಲ್ಲಿ ಜೀವನವೆಲ್ಲ ಪಾಪ ಮಾಡುತ್ತೇವೆ 14

ಸಾಧನೆಯ ಫಲವನ್ನು ಪಡೆಯಲಿಕ್ಕಾಗಿ 16

**ಎಲ್ಲದರ ಸಂಗ್ರಹ 20**

## ದೇವರ ಪೂಜೆ

ದೇವರ ಪೂಜೆಯ ಕುರಿತ ಲೇಖನ ಮತ್ತು ಉಪನ್ಯಾಸಗಳನ್ನು ಸದಾಚಾರಸ್ಮೃತಿಯ ಅನುವಾದದ ಅಂಗವಾಗಿ ನೀಡೋಣ ಎಂದಿದ್ದೆ. ಆದರೆ, ಸದಾಚಾರಸ್ಮೃತಿಯ ಅನುವಾದದ ಕಾರ್ಯ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿರುವದರಿಂದ ದೇವರ ಪೂಜೆಯ ಕುರಿತ ಲೇಖನ ಉಪನ್ಯಾಸಗಳನ್ನು ಆರಂಭಿಸಿ ಬಿಡುತ್ತೇನೆ.

ವಿಶ್ವನಂದಿನಿಯ ಮೇಲೆ ಅಪಾರ ಅಭಿಮಾನವುಳ್ಳ, ಶ್ರೀಮಧ್ವವಿಜಯದ ಉಪನ್ಯಾಸಗಳನ್ನು ಶ್ರದ್ಧಾ ಭಕ್ತಿಗಳಿಂದ ತಾವು ಶ್ರವಣ ಮಾಡುವದಷ್ಟೇ ಅಲ್ಲದೇ ಸಮಾನಮನಸ್ಕರಾದ ನೂರಾರು ಜನರಿಗೆ ಮಾಡಿಸಿ, ಅದರ ಮೇಲೆ ವಿಸ್ತಾರವಾಗಿ ರಸಪ್ರಶ್ನೆಗಳನ್ನೂ ಮಾಡುತ್ತಿರುವ ಆತ್ಮೀಯರಾದ ಶ್ರೀಪಾದರಾವ್ ಬನಾಜಿಯ ಒತ್ತಾಯ ಈ ದೇವರ ಪೂಜೆಯ ಲೇಖನ ಉಪನ್ಯಾಸಗಳನ್ನು ಮಾಡಲು

ಮುಖ್ಯ ಕಾರಣ. ಸುಮಾರು ಎರಡು ವರ್ಷಗಳಿಂದ ನಾನು ಈ ಅನುವಾದಗುಚ್ಛದ ಕೆಲಸವನ್ನು ಮುಂದೆ ಹಾಕುತ್ತಲೇ ಬರುತ್ತಿದ್ದೇನೆ. ಇನ್ನು ಶ್ರೀಪಾದರಾಯರನ್ನು ಸಮಯ ಕೇಳಲು ಸಾಧ್ಯವಿಲ್ಲ. ಮಾಡುವ ದೇವರ ಪೂಜೆಯನ್ನು ಕೇವಲ ಶ್ರದ್ಧೆಯಿಂದಷ್ಟೇ ಅಲ್ಲದೇ ಜ್ಞಾನಪುರಸ್ಸರವಾಗಿ ಮಾಡಬೇಕು ಎನ್ನುವ ಆ ಸಜ್ಜನರ ಕಳಕಳಿಯನ್ನು ಹೇಗೆ ತಿರಸ್ಕರಿಸಲಿ. ಹೀಗಾಗಿ ಶ್ರೀಮಟ್ಟೀಕಾಕೃತ್ಪಾದರ ಪದ್ಯಮಾಲಾ ಕೃತಿಯ ಅನುವಾದವನ್ನು ಅರ್ಥಾತ್ ದೇವರ ಪೂಜೆಯ ಕುರಿತ ಲೇಖನ ಉಪನ್ಯಾಸ-ಮಾಲೆಯನ್ನು ಆರಂಭಿಸುತ್ತೇನೆ.

ವಿಶ್ವನಂದಿನಿಯ ಸಮಸ್ತ ಬಾಂಧವರಿಗೂ ಇದು ಹೇಮಲಂಬ ಸಂವತ್ಸರದ ಯುಗಾದಿಯ ಪ್ರೀತಿಯ ಉಡುಗೊರೆ.

ಈ ಮೊದಲ ಲೇಖನದಲ್ಲಿ ದೇವರ ಪೂಜೆ ಎಂದರೇನು, ಯಾಕಾಗಿ ಮಾಡಬೇಕು, ಇದರಿಂದ ಉಂಟಾಗುವ ಪ್ರಯೋಜನಗಳೇನು ಎನ್ನುವದನ್ನು ತಿಳಿಯೋಣ.

## ದೇವರ ಪೂಜೆ ಎಂದರೇನು

ದೇವರ ಪೂಜೆ ಎನ್ನುವ ಶಬ್ದವನ್ನು ಶ್ರೀಮದಾಚಾರ್ಯರು ಎರಡು ಅರ್ಥದಲ್ಲಿ ಬಳಸುತ್ತಾರೆ. ಶಾಸ್ತ್ರವಿಹಿತವಾದ ಯಾವುದೇ ಸತ್ಕರ್ಮದ ಆಚರಣೆಯೂ ಭಗವಂತನ ಪೂಜೆಯೇ. **ತತ್ಪೂಜಾ ಕರ್ಮ ಚಾಖಿಲಮ್** ಎಂದು ಆಚಾರ್ಯರು ಗೀತಾತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತಾರೆ. ಅಖಿಲಂ ಕರ್ಮ ಎಂದರೆ ಶಾಸ್ತ್ರವಿಹಿತವಾದ ಸಕಲ ಸತ್ಕರ್ಮಗಳೂ ಎಂದರ್ಥ. ತತ್ಪೂಜಾ ಎಂದರೆ ಆ ಭಗವಂತನ ಪೂಜೆ ಎಂದರ್ಥ.

ಈ ಅರ್ಥದ ವ್ಯಾಪ್ತಿಯಲ್ಲಿ, ನಾವು ಮಾಡುವ ಸ್ನಾನ, ಸಂಧ್ಯಾವಂದನೆ, ತುಳಸೀಪೂಜೆ, ಗುರುಹಿರಿಯರಿಗೆ ಮಾಡುವ ನಮಸ್ಕಾರ, ಭೋಜನ, ಯಾತ್ರೆ, ಪರೋಪಕಾರ, ಶ್ರಾದ್ಧ, ಮೃತರ ಅಂತ್ಯಸಂಸ್ಕಾರ, ಮುಂತಾದ ಸಕಲ ಸತ್ಕರ್ಮಗಳೂ ಭಗವಂತನ ಪೂಜೆಯೇ.

ಎರಡನೆಯ ಪೂಜೆ, ಸಾಲಿಗ್ರಾಮ, ಪ್ರತಿಮೆ, ಚಕ್ರಾಬ್ಜಮಂಡಲ, ಕಲಶ ಮುಂತಾದವುಗಳಲ್ಲಿರುವ ಪರಮಾತ್ಮನಿಗೆ ಸಲ್ಲಿಸುವ ಷೋಡಶ ಉಪಚಾರಗಳು.

ಸಾಲಿಗ್ರಾಮಾದಿಗಳಲ್ಲಿ ನಿತ್ಯ ಸನ್ನಿಹಿತನಾದ ಭಗವಂತನಿಗೆ, ಅಥವಾ ಪ್ರತಿಮಾದಿಗಳಲ್ಲಿ ಆವಾಹಿಸಲ್ಪಟ್ಟ ದೇವರಿಗೆ ಅಥವಾ ಇತರ ದೇವತೆಗಳಿಗೆ ಅರ್ಘ್ಯದಿಂದ ಆರಂಭಿಸಿ ನಮಸ್ಕಾರದವರೆಗಿನ ಹದಿನಾರು ಉಪಚಾರಗಳನ್ನು ಸಲ್ಲಿಸಿದಲ್ಲಿ ಅದು ಪೂಜೆಯಾಗುತ್ತದೆ.

**ಅಂದರೆ ಪೂಜೆ ಎಂಬ ಶಬ್ದಕ್ಕೆ ಸತ್ಕರ್ಮದ ಆಚರಣೆ ಮತ್ತು ಷೋಡಶೋಪಾಚಾರಗಳು ಎಂಬ ಅರ್ಥವಿದೆ.**

**ಈ ಷೋಡಶ ಉಪಚಾರಗಳಲ್ಲಿಯೂ ಮುಖ್ಯವಾಗಿ ಪೂಜೆ ಎಂಬ ಶಬ್ದದಿಂದ ಕರೆಸಿಕೊಳ್ಳುವದು ತುಳಸಿ, ಹೂ, ನೈವೇದ್ಯಾದಿಗಳ ಸಮರ್ಪಣೆ.**

**ಇದಲ್ಲದೇ ಪೂಜೆ ಎಂದರೆ ಗೌರವಸಮರ್ಪಣೆ ಎಂಬ ಅರ್ಥವೂ ಶಾಸ್ತ್ರಗಳಲ್ಲಿವೆ.**

## ದೇವರ ಪೂಜೆ ಯಾಕಾಗಿ ಮಾಡಬೇಕು

ಈ ಪ್ರಶ್ನೆಗೆ ಸ್ವಯಂ ಭಗವಂತನೇ ಭಗವದ್ಗೀತೆಯಲ್ಲಿ  ಉತ್ತರವನ್ನು ನೀಡಿದ್ದಾನೆ. ಅದನ್ನು ತಿಳಿಯುವದಕ್ಕಿಂತ ಮುಂಚೆ ತಿಳಿಯಬೇಕಾದ ಮತ್ತೊಂದು ಕಾರಣವನ್ನು ತಿಳಿಯಬೇಕು.

## ಮಾಡು ಎಂದು ದೇವರ ಆಜ್ಞೆಯಿದೆ, ಅದಕ್ಕಾಗಿ

ನಾವು ಪ್ರತೀನಿತ್ಯ ದೇವರ ಪೂಜೆಯನ್ನು ಮಾಡಲೇಬೇಕು ಎಂದು ವೇದಗಳ ಆದೇಶವಿದೆ. **ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ** ಎಂದು. ವೇದಗಳ ಆದೇಶ ಎಂದರೆ ಸ್ವಯಂ ಭಗವಂತನ ಆಜ್ಞೆ. ಶ್ರುತಿಸ್ಮೃತೀ ಹರೇರಾಜ್ಞೇ. ದೇವರ ಆದೇಶವನ್ನು ಪಾಲಿಸಿದಾಗ ಮಾತ್ರ ದೇವರ ಅನುಗ್ರಹವನ್ನು ಪಡೆಯಲು ಸಾಧ್ಯ. ಹೀಗಾಗಿ ದೇವರ ಆದೇಶದಂತೆ ನಾವು ಪ್ರತೀನಿತ್ಯ ದೇವರ ಪೂಜೆಯನ್ನು ಮಾಡಲೇಬೇಕು.

## ಮಾಡದಿದ್ದಲ್ಲಿ ಲೋಕಚಕ್ರವನ್ನು ಮುರಿದ ಪಾಪ

ದೇವರ ಪೂಜೆ ಯಾಕಾಗಿ ಮಾಡಬೇಕು ಎನ್ನುವದಕ್ಕೆ ಸ್ವಯಂ ಶ್ರಿಕೃಷ್ಣ ನೀಡಿದ ಉತ್ತರ ಹೀಗಿದೆ —

**ಅನ್ನಾದ್ ಭವಂತಿ ಭೂತಾನಿ**
**ಪರ್ಜನ್ಯಾದನ್ನಸಂಭವಃ ।**
**ಯಜ್ಞಾದ್ ಭವತಿ ಪರ್ಜನ್ಯೋ**
**ಯಜ್ಞಃ ಕರ್ಮಸಮುದ್ಭವಃ ।।**

**ಏವಂ ಪ್ರವರ್ತಿತಂ ಚಕ್ರಂ**
**ನಾನುವರ್ತಯತೀಹ ।**
**ಅಘಾಯುರಿಂದ್ರಿಯಾರಾಮೋ**
**ಮೋಘಂ ಪಾರ್ಥ ಸ ಜೀವತಿ[1] ।।**

ಆಹಾರಪದಾರ್ಥಗಳಿಂದ ಭೂಮಿಯಲ್ಲಿ ಜೀವಸಂಕುಲ ಅಸ್ತಿತ್ವದಲ್ಲಿರಲು ಸಾಧ್ಯ.

ಆಹಾರಪದಾರ್ಥಗಳು ಭೂಮಿಯಲ್ಲಿ ಬೆಳೆಯಲಿಕ್ಕೆ ಇರಲಿಕ್ಕೆ ಕಾರಣ ಮಳೆ.

---

[1] ಭಗವದ್ಗೀತೆಯ ಮೂರನೆಯ ಅಧ್ಯಾಯದ 14,15ನೇ ಶ್ಲೋಕಗಳು.

ಮಳೆ ಉಂಟಾಗುವದು ಯಜ್ಞದಿಂದ. ಯಜ್ಞ ಎಂದರೆ ಭಗವಂತನಿಗಾಗಿ ದೇವತೆಗಳಿಗಾಗಿ ಮಾಡುವ ಪದಾರ್ಥಗಳ ಸಮರ್ಪಣೆ[2].

ಯಜ್ಞ ನಡೆಯ ಬೇಕಾದರೆ ಕರ್ತೃವಿನ ಬಳಿ ಎರಡು ವಸ್ತುಗಳಿರಬೇಕು. ಒಂದು ಭಗವಂತನಿಗೆ ಸಮರ್ಪಿಸಲ್ಪಡುವ ವಸ್ತುಗಳು, ಎರಡನೆಯ ಸಮರ್ಪಣೆ ಮಾಡುವ ಅರ್ಥಾತ್ ಯಜ್ಞ ಮಾಡುವ ಕ್ರಿಯೆ ಅವನಲ್ಲಿ ಮೂಡಬೇಕು.

ನಮಗೆ ಪದಾರ್ಥಗಳನ್ನು ನೀಡಿ ನಮ್ಮಿಂದ ಯಜ್ಞವನ್ನು ಮಾಡಿಸುವವನು ಪರಬ್ರಹ್ಮ- ಶ್ರೀಹರಿ. **ಕರ್ಮ ಬ್ರಹ್ಮೋದ್ಭವಂ ವಿದ್ಧಿ.**

---

[2] ದೇವರ ಪೂಜೆಯಲ್ಲಿ ತುಳಸಿ, ಹೂ, ನೀರು, ಗಂಧ, ಅನ್ನಾದಿಗಳನ್ನು ಸಾಲಿಗ್ರಾಮ, ಪ್ರತಿಮೆಗಳ ಮುಖಾಂತರ ಭಗವಂತನಿಗೆ, ದೇವತೆಗಳಿಗೆ ಸಮರ್ಪಿಸುತ್ತೇವೆ.

ಅಗ್ನಿಯಲ್ಲಿ ಮಾಡುವ ಹೋಮದಲ್ಲಿ ತುಪ್ಪ ಮುಂತಾದ ಪದಾರ್ಥಗಳನ್ನು ಅಗ್ನಿಯ ಮುಖಾಂತರ ಭಗವಂತನಿಗೆ, ದೇವತೆಗಳಿಗೆ ಸಮರ್ಪಿಸುತ್ತೇವೆ.

ಒಟ್ಟಾರೆ ಸಕಲ ವರ್ಣಾಶ್ರಮವಿಹಿತ ಕರ್ಮಗಳನ್ನು ದೇವರು ಯಜ್ಞಶಬ್ದದಿಂದ ಕರೆಯುತ್ತಿದ್ದಾನೆ ಎಂದು ಶ್ರೀ ಮಂತ್ರಾಲಯಪ್ರಭುಗಳು ತಿಳಿಸುತ್ತಾರೆ.

ಆ ಪರಬ್ರಹ್ಮ ನಮಗೆ ಗೋಚರವಾಗುವದು ಅಕ್ಷರಗಳಿಂದ ಅರ್ಥಾತ್, ವೇದಗಳಿಂದ, ಶಾಸ್ತ್ರಗಳಿಂದ. **ಬ್ರಹ್ಮಾಕ್ಷರಸಮುದ್ಭವಮ್.**

ವೇದಗಳನ್ನು, ಶಾಸ್ತ್ರಗಳನ್ನು ತಿಳಿಯಬೇಕಾದವನು ಸಾಧಕನಾದ ಜೀವ.

ಅವನು ಕಲಿಯಬೇಕೆಂದರೆ, ಅವನು ಹುಟ್ಟಬೇಕು, ಬದುಕಬೇಕು. ನಾವು ಹುಟ್ಟುವದು, ಬದುಕುವದು ಅನ್ನದಿಂದ.

ಅನ್ನ ಬೇಕೆಂದರೆ ಮಳೆ ಬೇಕು.

ಮಳೆ ಬೇಕೆಂದರೆ ನಾವು ಯಜ್ಞ ಮಾಡಬೇಕು.

ಯಜ್ಞ ಮಾಡಿಸುವವನು ಶ್ರೀಹರಿ.

ಆ ಶ್ರೀಹರಿ ತಿಳಿಯಲ್ಪಡುವದು ವೇದಗಳಿಂದ.

ಹೀಗೆ ನಾವು ಮುಕ್ತಿಗೆ ಕಾರಣವಾಗುವಂತೆ ಶ್ರೀಹರಿಯನ್ನು ತಿಳಿಯಬೇಕಾದರೆ ನಾವು ವೇದಗಳನ್ನು ಅಧ್ಯಯನ ಮಾಡಬೇಕು.

ಅಧ್ಯಯನಕ್ಕೆ ಅತ್ಯಾವಶ್ಯಕವಾದದ್ದು ಮನುಷ್ಯಶರೀರ ಮತ್ತು ಬದುಕು. ಆ ಶರೀರ ಮತ್ತು ಜೀವನವನ್ನು ನೀಡುವ ಅನ್ನ ಹುಟ್ಟುವದು ಮಳೆಯಿಂದ. ಆ ಮಳೆಯಾಗಬೇಕಾದರೆ ನಾವು ಯಜ್ಞ ಮಾಡಲೇ ಬೇಕು.

ಆ ಯಜ್ಞ ಯಾವುದು. ನಮ್ಮ ವರ್ಣ ಮತ್ತು ಆಶ್ರಮಗಳಿಗೆ ವಿಹಿತವಾದ ಸಕಲ ಕರ್ಮಗಳೂ ಯಜ್ಞಗಳೇ. ಮುಖ್ಯವಾಗಿ ಪಂಚಮಹಾಯಜ್ಞಗಳು.

**ಬ್ರಹ್ಮಯಜ್ಞ, (ಅಧ್ಯಯನ, ಅಧ್ಯಾಪನ)**

**ದೇವಯಜ್ಞ, (ಪೂಜೆ, ಹೋಮ)**

**ಪಿತೃಯಜ್ಞ, (ತರ್ಪಣ,ಶ್ರಾದ್ಧ)**

**ನರಯಜ್ಞ (ಅತಿಥಿಪೂಜೆ)**

**ಭೂತಯಜ್ಞ, (ಬಲಿಹರಣ)**

ಎಂಬ ಪಂಚಮಹಾಯಜ್ಞಗಳಲ್ಲಿ ಬ್ರಹ್ಮಯಜ್ಞದ ನಂತರದ ಸ್ಥಾನ ದೇವಯಜ್ಞಕ್ಕಿದೆ. ಹೋಮ ಮತ್ತು

ಪೂಜೆ ಎಂಬ ಎರಡುವಿಧವಾದ ದೇವಯಜ್ಞದಲ್ಲಿ ಪೂಜೆ ಅತ್ಯಂತ ಮಹತ್ತ್ವದ್ದು[3].

ಸಾಲಿಗ್ರಾಮ, ಪ್ರತಿಮೆಗಳಿಗೆ ನಾವು ಮಾಡುವ ತುಳಸಿ, ಹೂ, ನೀರು, ನೈವೇದ್ಯ, ಗಂಧಾದಿಗಳ ಸಮರ್ಪಣೆಯೇ ದೇವಯಜ್ಞ. ಇದನ್ನು ನಾವು ಮಾಡದಿದ್ದಲ್ಲಿ ಲೋಕಚಕ್ರವನ್ನು ಘಾತಗೊಳಿಸಿದ ಪಾತಕಕ್ಕೆ ಒಳಗಾಗುತ್ತೇವೆ.

ದೇವರ ಪೂಜೆ ಮಾಡದೇ ಇದ್ದಲ್ಲಿ ನಾವು ಅಘಾಯುಗಳಾಗುತ್ತೇವೆ, ಅರ್ಥಾತ್ ನಮ್ಮ ಇಡಿಯ ಆಯುಷ್ಯ ಪಾಪವನ್ನು ಮಾಡಲಿಕ್ಕಾಗಿ ಮಾತ್ರ ವಿನಿಯೋಗವಾಗುತ್ತದೆ, ನಾವು ಮನುಷ್ಯಜನ್ಮವನ್ನು ಪಡೆದದ್ದೇ ವ್ಯರ್ಥವಾಗುತ್ತದೆ ಎಂದು ಎಂದು ಭಗವಂತ ತಿಳಿಸುತ್ತಾನೆ. **ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ** ಎಂದು.

---

[3] ಶ್ರೀಮದಾಚಾರ್ಯರು ಸಾಧನೆಯ ತಾರತಮ್ಯವನ್ನು ತಿಳಿಸಬೇಕಾದರೆ ದೇವರಪೂಜೆಗೆ ಅತ್ಯುನ್ನತಸ್ಥಾನವನ್ನು ನೀಡಿದ್ದಾರೆ. ದೇವರ ಪೂಜೆಯಿಂದ ಉಂಟಾಗುವ ಪ್ರಯೋಜನಗಳು ಎಂಬ ಮುಂದಿನ ಲೇಖನದಲ್ಲಿ ಅದನ್ನು ವಿವರಿಸುತ್ತೇನೆ.

ನಮ್ಮ ಜೀವಿತದ ಸಾರ್ಥಕ್ಯ ನಾವು ಮಾಡುವ ದೇವರ ಪೂಜೆಯಲ್ಲಿದೆಯಾದ್ದರಿಂದ ನಾವು ದೇವರಪೂಜೆಯನ್ನು ಮಾಡಲೇಬೇಕು.

## ಪೂಜೆ ಮಾಡದ ಮನುಷ್ಯ ಕಳ್ಳ — ಗೀತೆ

ದೇವರ ಪೂಜೆಯನ್ನು ಮಾಡದಿದ್ದಲ್ಲಿ ನಮ್ಮನ್ನು ಕಳ್ಳರು ಎಂದೇ ಭಗವದ್ಗೀತೆ ಕರೆಯುತ್ತದೆ.

**ತೈರ್ದತ್ತಾನ್ ಅಪ್ರದಾಯ್ಯೈಭ್ಯೋ
ಯೋ ಭುಂಕ್ತೇ ಸ್ತೇನ ಏವ ಸಃ**

ಭಗವಂತನಿಂದ ದೇವತೆಗಳಿಂದ ನಮಗೆ ಈ ಪ್ರಪಂಚ, ಮಳೆ, ಬೆಳೆಗಳು ದೊರಕಿವೆ. ಅವರು ಅನುಗ್ರಹಿಸಿದ ಪದಾರ್ಥಗಳನ್ನು ಅವರಿಗೆ ಸಮರ್ಪಿಸದೇ ಯಾವನು ಉಣ್ಣುತ್ತಾರೆಯೋ ಅವನು ಕಳ್ಳ. **ಸ್ತೇನ ಏವ ಸಃ.**

ಬದುಕಲಿಕ್ಕಾಗಿ ನಾವು ಊಟ ಮಾಡಲೇಬೇಕು. ಮಾಡಿದ ಅಡಿಗೆಯನ್ನು ಶ್ರೀಹರಿಗೆ, ದೇವತೆಗಳಿಗೆ[4], ಗುರುಗಳಿಗೆ ಸಮರ್ಪಿಸದೇ ಉಂಡರೆ ಕಳ್ಳರಾಗುತ್ತೇವೆ.

ಯಾರೋ ಕೆಲಸಕ್ಕೆ ಬಾರದವರು ನಮ್ಮನ್ನು ನಿಂದೆ ಮಾಡಿದರೆ ದುಃಖ ಪಡುವ ಕಾರಣವಿಲ್ಲ. ಬದಲಾಗಿ ಸಂತೋಷವನ್ನೇ ಪಡಬೇಕು. ಕಾರಣ ನಮ್ಮ ಪಾಪಗಳನ್ನು ನಮ್ಮ ನಿಂದಕರು ಹೊತ್ತೊಯ್ಯುತ್ತಾರೆ. ಆದರೆ, ಶಾಸ್ತ್ರದಿಂದ ದೇವತೆಗಳಿಂದ ನಾವು ನಿಂದಿತರಾಗಬಾರದು. ಶಾಸ್ತ್ರ ನಮ್ಮನ್ನು ಕಳ್ಳರು ಎನ್ನಬಾರದು. ದೇವತೆಗಳನ್ನು ನಮ್ಮನ್ನು ನಿಂದಿಸಬಾರದು. ನಮ್ಮನ್ನು ಕಳ್ಳರೆಂದು ಅವರು ನಿಂದಿಸಬಾರದು ಎಂದಾದಲ್ಲಿ ನಾವು ಉಣ್ಣುವದನ್ನು ಅವರಿಗೆ ಸಮರ್ಪಿಸಿಯೇ ಉಣ್ಣಬೇಕು. ಹೀಗೆ ದೇವರ ಪೂಜೆ ಮಾಡದವನನ್ನು ಗೀತೆ ಕಳ್ಳ ಎಂದು ಕರೆಯುತ್ತದೆ.

---

[4] ರುದ್ರಾದಿದೇವತೆಗಳಿಗೆ ನೈವೇದ್ಯ ಮಾಡಿದ್ದನ್ನೇ ತಿನ್ನಬೇಕು ಎಂದರ್ಥವಲ್ಲ. ಅವರಿಗೆ ಪ್ರತ್ಯೇಕವಾಗಿ ಸಮರ್ಪಿಸಿ, ಆ ನೈವೇದ್ಯವನ್ನು ಗೋಗ್ರಾಸವನ್ನಾಗಿ ನೀಡಿ ಶ್ರೀಹರಿ ವಾಯು ಗುರುಗಳ ನೈವೇದ್ಯವನ್ನು ಸ್ವೀಕರಿಸಬೇಕು ಎಂದರ್ಥ.

## ಪೂಜೆ ಮಾಡದಿದ್ದಲ್ಲಿ ಜೀವನವೆಲ್ಲ ಪಾಪ ಮಾಡುತ್ತೇವೆ

ಮತ್ತೂ ಒಂದೂ ಎಚ್ಚರಿಕೆಯ ಮಾತನ್ನು ಭಗವದ್ಗೀತೆ ತಿಳಿಸುತ್ತದೆ —

**ಭುಂಜತೇ ತೇ ತ್ವಘಂ ಪಾಪಾ**
**ಯೇ ಪಚಂತ್ಯಾತ್ಮಕಾರಣಾತ್**

ದೇವರಿಗಾಗಿ ಅಡಿಗೆ ಮಾಡದೇ, ಯಾರು ಕೇವಲ ತಮ್ಮ ಹೊಟ್ಟೆ ಹೊರೆಯಲು ಮಾತ್ರ ಅಡಿಗೆಯನ್ನು ಮಾಡಿಕೊಂಡು ಉಣ್ಣುತ್ತಾರೋ ಅವರು ಉಣ್ಣುವದು ಅನ್ನವನ್ನಲ್ಲ ಪಾಪವನ್ನು ಎಂದು ಶ್ರೀಕೃಷ್ಣ ತಿಳಿಸುತ್ತಾನೆ. ತೇ ಅಘಂ ಭುಂಜತೆ. ಅಘ ಎಂದರೆ ಪಾಪ.

ಗೀತೆಯ ಈ ಮಾತಿನ ಅಭಿಪ್ರಾಯವನ್ನು ಶ್ರೀ ವಿದ್ಯಾಧಿರಾಜತೀರ್ಥಗುರುಸಾರ್ವಭೌಮರು ಮನಮುಟ್ಟುವಂತೆ ತಿಳಿಸುತ್ತಾರೆ — **“ಯೇ ತು ಆತ್ಮಭೋಜನಾರ್ಥಮೇವ ಪಚಂತಿ, ನತು ವಿಷ್ಣುಪೂಜಾರ್ಥಮ್, ತೇ ಪಾಪಾ ದುರಾಚಾರಾಃ ಅಘನಿಮಿತ್ತಮೇವ ಭುಂಜತೇ”**

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ತಮ್ಮ ಪೂರ್ವಾಚಾರ್ಯರು ಬಳಸಿದ ಅಘನಿಮಿತ್ತಮ್ ಎಂಬ ಶಬ್ದದ ಅರ್ಥವನ್ನು ಇನ್ನೂ ಸ್ಪಷ್ಟವಾಗಿ ತಿಳಿಸುತ್ತಾರೆ — **“ಅಘತನಿಮಿತ್ತಮೇವ ಭುಂಜತೇ, ತದ್ಭೋಜನಂ ಪಾಪಹೇತುರಿತ್ಯರ್ಥಃ”**

ಯಾರು ತಮ್ಮ ಭೋಜನಕ್ಕೆ ಎಂದೇ ಅಡಿಗೆ ಮಾಡಿಕೊಳ್ಳುತ್ತಾರೆಯೋ, ದೇವರ ಪೂಜೆಗೆ ಎಂದು ಅಡಿಗೆ ಮಾಡುವದಿಲ್ಲವೋ ಅವರು ಉಣ್ಣುವ ಪದಾರ್ಥಗಳು ಅವರಿಂದ ಪಾಪವನ್ನೇ ಮಾಡಿಸುತ್ತವೆ.

ಅಂದರೆ, ನಮ್ಮಿಂದ ಸತ್ಕರ್ಮಗಳು ನಡೆಯಬೇಕಾದರೆ ನಾವು ಉಣ್ಣುವ ಅನ್ನ ಭಗವಂತನಿಗೆ ಸಮರ್ಪಿತವಾಗಿರಬೇಕು. ಭಗವಂತನಿಗೆ ಮಾಡುವ ಸಮರ್ಪಣೆಯೇ ದೇವರಪೂಜೆ.

## ಸಾಧನೆಯ ಫಲವನ್ನು ಪಡೆಯಲಿಕ್ಕಾಗಿ

ದೇವರಪೂಜೆಯನ್ನು ಯಾಕಾಗಿ ಮಾಡಬೇಕು ಎನ್ನುವ ಪ್ರಶ್ನೆಗೆ ಕಾರಣವಾಗಿ ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಮತ್ತೊಂದು ಉತ್ತರವನ್ನು ನೀಡುತ್ತಾರೆ —

**ಜಪಧ್ಯಾನಹುತಾರ್ಚಾದೀನ್**
**ಏವಂ ಯಃ ಕುರುತೇ ಸದಾ**
**ಧರ್ಮಾರ್ಥಕಾಮಮೋಕ್ಷಾಣಾಂ**
**ಭಾಜನಂ ಸ್ಯಾತ್ ಸ ಏವ ಹಿ**

ಉತ್ತಮನಾದ ಮನುಷ್ಯ ಅಪೇಕ್ಷೆ ಪಡುವ ವಸ್ತುಗಳು ನಾಲ್ಕು —

ಉತ್ತಮನಾಗಿ ಇರಬೇಕು, ಅರ್ಥಾತ್ ಧರ್ಮ.

ಅನುಭವಿಸಲು ಹಣ ಬೇಕು. ಅರ್ಥಾತ್ ಅರ್ಥ.

ಆನಂದದಿಂದ ಅನುಭವಿಸಬೇಕು. ಅರ್ಥಾತ್ ಕಾಮ.

ಶಾಶ್ವತವಾದ ಸುಖ ಬೇಕು. ಅರ್ಥಾತ್ ಮೋಕ್ಷ.

ಇದಕ್ಕಾಗಿ ಮನುಷ್ಯ ಹಗಲಿರುಳೂ ಪ್ರಯತ್ನಿಸುತ್ತಾನೆ. ನೈತಿಕತೆಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ದುರ್ಜನನಾಗದಿರಲು ಪ್ರಯತ್ನಿಸುತ್ತಾನೆ. ಆದರೆ ದುಷ್ಟಬುದ್ಧಿಯನ್ನು ತೋರದೇ ಇರಲು ಸಾಧ್ಯವಾಗದೇ ದುರ್ಜನನಾಗಿಬಿಡುತ್ತಾನೆ. ತಪ್ಪು ಮಾಡಿಬಿಡುತ್ತಾನೆ. ಅಂದರೆ ಅಧರ್ಮ ಮಾಡುತ್ತಾನೆ.

ಹಣ ಸಂಪಾದಿಸಲು ಹಗಲಿರುಳೂ ಪ್ರಯತ್ನಿಸುತ್ತಾನೆ. ಆದರೆ, ಅಂತ್ಯದಲ್ಲಿ ಪರಿಣಾಮ ಮಾತ್ರ ಶೂನ್ಯ. ಅವನ ಪ್ರಯತ್ನಗಳೂ ಅರ್ಥಹೀನವಾಗುತ್ತವೆ, ಅವನ ಬದುಕೂ 'ಅರ್ಥ'ಹೀನವಾಗುತ್ತದೆ.

ಇರುವ ಕೆಲವು ಸಂಪತ್ತನ್ನೂ ಅನುಭವಿಸಲು ಅವನಿಗೆ ನೆಮ್ಮದಿ ಇರುವದಿಲ್ಲ. ಕಟ್ಟಿಕೊಂಡ ಮನೆಗೆ ಹೋಗಬೇಕೆಂದರೂ ಅವನು ದುಃಖ

ಪಡುತ್ತಾನೆ. ಕಾಮದ ಉಪಭೋಗದಿಂದ ದೂರವಾಗುತ್ತಾನೆ.

ಇನ್ನು ಶಾಶ್ವತ ಸುಖ, ಅಂದರೆ ಮೋಕ್ಷ ಅದರ ಹಾದಿಯನ್ನೂ ಸಹ ಮನುಷ್ಯ ಪ್ರವೇಶಿಸಿರುವದಿಲ್ಲ.

ಯಾಕೆ ಹೀಗಾಗುತ್ತದೆ ಎನ್ನುವದಕ್ಕೆ ಆಚಾರ್ಯರು ನೀಡಿದ ಉತ್ತರ, ಬ್ರಾಹ್ಮಣ ತಾನು ಮಾಡಬೇಕಾದ ಜಪ, ಹೋಮ, ಪೂಜೆಗಳನ್ನು ಬಿಟ್ಟಿದ್ದಾನೆ, ಅದಕ್ಕಾಗಿ ಅವನು ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಪಡೆಯದೇ ಹೋಗುತ್ತಾನೆ.

ಏವಂ ಶಾಸ್ತ್ರ ತಿಳಿಸಿದ ರೀತಿಯಲ್ಲಿ ಜಪಧ್ಯಾನಹುತಾರ್ಚಾದೀನ್ ಜಪ, ಹೋಮ, ಪೂಜೆಗಳನ್ನು ಯಃ ಕುರುತೇ ಯಾರು ಮಾಡುತ್ತಾರೆಯೋ ಸ ಏವ ಅವನು ಮಾತ್ರ ಧರ್ಮಾರ್ಥಕಾಮಮೋಕ್ಷಾಣಾಂ ಭಾಜನಂ ಸ್ಯಾತ್ ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಪಡೆಯಲು ಅರ್ಹನಾಗುತ್ತಾನೆ.

ಅಂದರೆ ನಮ್ಮಲ್ಲಿ ನೈತಿಕತೆ ಮೂಡಲು, ನಾವು ಸಿರಿವಂತರಾಗಲು, ನಾವು ಕಾಮವನ್ನು

ಅನುಭವಿಸಲು ಅರ್ಹರಾಗಲು[5], ಮೋಕ್ಷವನ್ನು ಪಡೆಯುವ ಅರ್ಹತೆಯನ್ನು ಗಳಿಸಲು ನಾವು ದೇವರ ಪೂಜೆ ಮಾಡಬೇಕು.

ನಾವು ಉಪದೇಶಪಡೆದ ಮಂತ್ರಗಳ ಜಪ ಮಾಡುವದರಿಂದ, ನಮಗೆ ವಿಹಿತವಾದ ಯಜ್ಞಗಳನ್ನು ಮಾಡುವದರಿಂದ, ಪ್ರತೀನಿತ್ಯ ದೇವರ ಪೂಜೆ ಮಾಡುವದರಿಂದ ಮಾತ್ರ ನಾವು ಉಳಿದ ಯಾವುದೇ ಸತ್ಕರ್ಮಗಳ ಫಲವನ್ನು ಪಡೆಯಲು ಸಾಧ್ಯ.

ಅಂದರೆ, ಮಗಳನ್ನು ಯೋಗ್ಯವರನಿಗೆ ಕೊಟ್ಟು ಮದುವೆ ಮಾಡಿದೆವು. ಅದರಿಂದ ಮಹತ್ತರ ಪುಣ್ಯ ಬರುತ್ತದೆ. ಆ ಪುಣ್ಯವನ್ನು ನಾವು ಪಡೆಯುವ ಅರ್ಹತೆಯನ್ನು ನೀಡುವ ಕರ್ಮ ಅದು ದೇವರಪೂಜೆ.

---

[5] ಕಾಮದ ಅನುಭವ ಎನ್ನುವ ಶಬ್ದಕ್ಕೆ ಕೇವಲ ಲೈಂಗಿಕ ಸುಖದ ಅನುಭವ ಎಂದರ್ಥವಲ್ಲ. ನಮ್ಮ ಹನ್ನೊಂದೂ ಇಂದ್ರಿಯಗಳಿಂದ ನಾವು ಅನುಭವಿಸುವ ಎಲ್ಲವೂ ಕಾಮದ ಉಪಭೋಗಗಳೇ. ಶಾಸ್ತ್ರವಿಹಿತವಾದ ಎಲ್ಲ ಭೋಗಗಳನ್ನೂ ಅವಶ್ಯವಾಗಿ ಮನುಷ್ಯ ಅನುಭವಿಸಬಹುದು. ಹೀಗಾಗಿ ಕಾಮ ಇದು ತುಚ್ಛವಲ್ಲ. ಪರಸ್ತ್ರೀ,ಪರಪುರುಷಕಾಮ, ಪರವಸ್ತುಕಾಮ ತುಚ್ಛ. ನಿಷಿದ್ಧರೀತಿಯಲ್ಲಿ ಅನುಭವಿಸುವದು ತುಚ್ಛ.

## ಎಲ್ಲದರ ಸಂಗ್ರಹ

ನಾವು ಮಾಡುವ ಸಕಲ ಸತ್ಕರ್ಮಗಳಿಗೆ ದೇವರ ಪೂಜೆ ಎಂದೇ ಹೆಸರು.

ಸಾಲಿಗ್ರಾಮ, ಪ್ರತಿಮೆಗಳಲ್ಲಿರುವ ಭಗವಂತನಿಗೆ ಸಮರ್ಪಿಸುವ ಉಪಚಾರಗಳಿಗೆ ದೇವರ ಪೂಜೆ ಎನ್ನುತ್ತಾರೆ.

ಪ್ರತೀನಿತ್ಯ ದೇವರ ಪೂಜೆ ಮಾಡಬೇಕು ಎಂದು ಶಾಸ್ತ್ರದ ಆದೇಶವಿದೆ, ಶಾಸ್ತ್ರದ ಆದೇಶ ಎಂದರೆ ಶ್ರೀಹರಿಯ ಆಜ್ಞೆ. ಪರಮಾತ್ಮನ ಆದೇಶವಿರುವದರಿಂದ ನಾವು ದೇವರ ಪೂಜೆಯನ್ನು ಮಾಡಬೇಕು.

ಯಜ್ಞವನ್ನು ಮಾಡದಿದ್ದರೆ ನಾವು ಲೋಕಚಕ್ರವನ್ನು ಘಾತಗೊಳಿಸಿದ ಮಹತ್ತರ ಪಾಪಕ್ಕೆ ಗುರಿಯಾಗುತ್ತೇವೆ, ಅದಕ್ಕಾಗಿ ನಾವು ದೇವರಪೂಜೆ ಎಂಬ ದೇವಯಜ್ಞವನ್ನು ಆಚರಿಸಲೇಬೇಕು.

ದೇವರು ಕೊಟ್ಟ ಪದಾರ್ಥಗಳನ್ನು[6] ದೇವರಿಗೆ ಸಮರ್ಪಿಸದೇ ಉಂಡರೆ/ಅನುಭವಿಸಿದರೆ ಶಾಸ್ತ್ರ ನಮ್ಮನ್ನು ಕಳ್ಳರು ಎಂದು ಕರೆಯುತ್ತದೆ, ಅದಕ್ಕಾಗಿ ದೇವರಪೂಜೆಯನ್ನು ಮಾಡಬೇಕು.

ದೇವರಿಗೆ ಸಮರ್ಪಿಸದೇ ಉಂಡ ಅನ್ನ, ಅನುಭವಿಸುವ ಪದಾರ್ಥಗಳು ನಮ್ಮಿಂದ ಪಾಪವನ್ನೇ ಮಾಡಿಸುತ್ತವೆ, ಆ ಪಾಪದಿಂದ ನಾವು ಮಹಾಮಹಾ ಅನರ್ಥಕ್ಕೆ ಗುರಿಯಾಗಿ ವಿನಾಶವಾಗುತ್ತೇವೆ. ನಾವು ಪಾಪಗಳನ್ನು ಮಾಡಬಾರದು ಎಂದಾದಲ್ಲಿ, ನಮ್ಮ ಜೀವನದಲ್ಲಿ ನಾವು ಸತ್ಕರ್ಮಗಳನ್ನು ಮಾಡಿ ಮುಕ್ತಿಯನ್ನು ಗಳಿಸಬೇಕು, ಧರ್ಮಾರ್ಥಕಾಮಗಳನ್ನು ಪಡೆಯಬೇಕು ಎಂದಾದಲ್ಲಿ ನಾವು ದೇವರಪೂಜೆಯನ್ನು ಮಾಡಲೇಬೇಕು.

ಶಾಸ್ತ್ರ ಆದೇಶಿಸಿದೆ, ಮಾಡದಿದ್ದಲ್ಲಿ ಪಾಪ ಬರುತ್ತದೆ

---

[6] ಕೇವಲ ಅನ್ನ ಆಹಾರಗಳಷ್ಟೇ ಅಲ್ಲ. ನಾವು ಉಡುವ ಬಟ್ಟೆಯಿಂದ ಹಿಡಿದು ವಾಸಿಸುವ ಮನೆಯವರೆಗೆ, ಉಪಯೋಗಿಸುವ ಪದಾರ್ಥಗಳಿಂದ ಹಿಡಿದು ನಮ್ಮ ಪಡೆಯು ಸಕಲ ಸೌಭಾಗ್ಯಗಳನ್ನೂ ದೇವರಿಗೆ ಸಮರ್ಪಿಸಿಯೇ ಅನುಭವಿಸಬೇಕು. ಇಲ್ಲದಿದ್ದರೆ ಗೀತೆ ನಮಗೆ ಕಳ್ಳರ ಪಟ್ಟವನ್ನು ಕಟ್ಟುತ್ತದೆ.

ಎಂಬ ಕಾರಣಗಳಿಗಾಗಷ್ಟೇ ನಾವು ದೇವರ ಪೂಜೆಯನ್ನು ಮಾಡಬೇಕಾದ್ದಲ್ಲ, ದೇವರ ಪೂಜೆಯನ್ನು ಮಾಡುವದರಿಂದ ನಾವು ಊಹಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲದಷ್ಟು ಪರಮಾದ್ಭುತವಾದ ಪ್ರಯೋಜನಗಳನ್ನು ಪಡೆದುಕೊಳ್ಳುತ್ತೇವೆ.

ನಮ್ಮ ಹಿಂದಿನ ಜನ್ಮಗಳ ನೆನಪಿನಿಂದ ಆರಂಭಿಸಿ ಅಂತರ್ಯಾಮಿಯ ಸಾಕ್ಷಾತ್ಕಾರದವರೆಗೆ ಜ್ಞಾನವನ್ನು ಕರುಣಿಸುವ ಮಹಾ ಸತ್ಕರ್ಮ ದೇವರಪೂಜೆ.

ತಿನ್ನಲು ಅನ್ನ, ಉಡಲು ಬಟ್ಟೆ, ಇರಲು ಮನೆಯಿಂದ ಆರಂಭಿಸಿ ಮೋಕ್ಷದಲ್ಲಿನ ಅನಂತಸುಖದವರೆಗಿನ ಸೌಭಾಗ್ಯವನ್ನು ಕರುಣಿಸುವ ಕಾಮಧೇನು ದೇವರ ಪೂಜೆಯೆಂಬ ಸತ್ಕರ್ಮ.

ದೇವರ ಪೂಜೆಯಿಂದ ಉಂಟಾಗುವ ಆ ಪ್ರಯೋಜನಗಳ ಕುರಿತು ಮುಂದಿನ ಲೇಖನದಲ್ಲಿ ತಿಳಿಯೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491